# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನಿಗಮ ಕಛೇರಿ, No.927, ಎಲ್.ಜೆ. ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್
ನ್ಯೂ ಕಾಂತರಾಜ ಅರಸ್ ರಸ್ತೆ, ಸರಸ್ವತಿ ಪುರಂ, ಮೈಸೂರು-570009 CIN U40109KA2004SGC035177
ಸಹಾಯಕ ಕಾರ್ಯ ನಿರ್ವಾಹಕಇಂಜನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.

Website : www.cescmysore.org
ದೂರವಾಣಿ :
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742

ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/18-19/ 152-155 ದಿನಾಂಕ : 12/6/2018

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 25.05.2018 ರಂದು ಬೆಳಿಗ್ಗೆ 11.00 ಗಂಟೆಗೆ ಅಧೀಕ್ಷಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.</u>

1. ಶ್ರೀ. ಶ್ರೀನಾಥ್, ಪ್ರಭಾರ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ
2. ಶ್ರೀ ಎಹಸಾನ್ ಉಲ್ಲ್ ಹಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀಮತಿ, ನೇತ್ರಾವತಿ.ಕೆ, ಸಹಾಯಕ ಇಂಜಿನಿಯರ್(ತಾಂ),ಎನ್.ಆರ್.ಮೊಹಲ್ಲಾ ಉಪವಿಭಾಗ.
4. ಶ್ರೀ ಶ್ರೀನಿವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
5. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
6. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ.
7. ಶ್ರೀಮತಿ ಸುನೀತಾ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
8. ಶ್ರೀ ರಾಚಯ್ಯ, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ
9. ಶ್ರೀಮತಿ ಬಿ.ಆರ್.ನಾಗರತ್ನ, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ,ಎನ್.ಆರ್.ಮೊಹಲ್ಲಾ ಉಪವಿಭಾಗ.
10. ಶ್ರೀ ಸಿದ್ದರಾಜು, ಮೇಲ್ವಿಚಾರಕರು, ಎನ್.ಆರ್.ಮೊಹಲ್ಲಾ ಸೇವಾ ಕೇಂದ್ರ.

ಅಧೀಕ್ಷಕ ಇಂಜಿನಿಯರ್(ವಿ), ರವರು ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿದರು. ದಿನಾಂಕ 15.02.2018 ರಂದು ನಡೆದಿದ್ದ ಜನ ಸಂಪರ್ಕ ಸಭೆಯಲ್ಲಿ ಬಂದಿದ್ದ ದೂರಗಳ ಬಗ್ಗೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಪಡೆದು ಗ್ರಾಹಕರಿಗೆ ವಿದ್ಯುತ್ ಸಂಬಂಧಿತ ಯಾವುದೇ ದೂರಗಳು ಇದ್ದರೆ ಈ ಸಭೆಯಲ್ಲಿ ತಿಳಿಸುವಂತೆ ಕೋರಿದರು.

<u>ಕಳೆದ ತ್ರೈಮಾಸಿಕ ಜನ ಸಂಪರ್ಕ ಸಭೆಯಲ್ಲಿ ನೊಂದಾವಣೆ ಮಾಡಲಾಗಿದ್ದ, ವಿದ್ಯುತ್ ಗ್ರಾಹಕರ ದೂರುಗಳನ್ನು ಪರಿಶೀಲನೆ ಮಾಡಿರುವ ವಿವರ.</u>

1. ಶ್ರೀಮತಿ ಫಕೀರ್ ಖಾನಮ್, ನಂ 174, 2ನೇ ಮೇನ್, ಸುಭಾಷ್ ನಗರ ರವರು ತಮ್ಮ ಮನೆಗೆ ಪ್ರತಿ ಮಾ ಬರುತ್ತಿರುವ ವಿದ್ಯುತ್ ಬಿಲ್ಲಿನಲ್ಲಿ ನ್ಯೂನ್ಯತೆಗಳನ್ನು ಶಾಖಾಧಿಕಾರಿಯಾದ ಶ್ರೀಯುತ ಶ್ರೀನಿವಾಸ್ ರವರು ಸ್ಥ ಪರಿಶೀಲನೆ ಮಾಡಿ, ಗ್ರಾಹಕರಿಗೆ ವಿದ್ಯುತ್ ಬಿಲ್ಲಿನ ಬಗ್ಗೆ ಮನವರಿಕೆ ಮಾಡಿ ಈ ದೂರನ್ನು ಸರಿಪಡಿಸಿರುತ್ತಾರೆ.

2. ಶ್ರೀಯುತ ಬಾಬು, ಬೆಲವತ್ತ ಗ್ರಾಮ ರವರು ಬೆಲವತ್ತ ಗ್ರಾಮ ಪುಷ್ಪಗಿರಿ ಸುತ್ತಾಮುತ್ತ Low Voltage ಬಿ ವಿದ್ಯುತ್ ಸಮಸ್ಯೆಯನ್ನು ಶಾಖಾಧಿಕಾರಿಯಾದ ಶ್ರೀಯುತ ವೈ.ಸಿ.ನಿತೀಶ್, ರವರ ಹಾಲಿ ಇರುವ 25 ಕೆ.ವಿ. ಪರಿವರ್ತಕವನ್ನು 63 ಕೆ.ವಿ.ಎಗೆ ಏರಿಕೆ ಮಾಡಿ ಗ್ರಾಹಕರ ಸಮಸ್ಯೆಯನ್ನು ಬಗ್ಗೆ ಹರಿಸಿರುತ್ತಾರೆ.

3. ಶ್ರೀ ಬಾಬು ರವರು ಬೆಲವತ್ತ ಗ್ರಾಮದ ಸುತ್ತಮುತ್ತ ಹಲವಾರು ಶಿಥಿಲಗೊಂಡ ವಿದ್ಯುತ್ ಕಂಬಗಳನ್ನು ತುರ್ತಾ ಬದಲಾಯಿಸಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸುವಂತೆ ಕೋರಿದ ಹಿನ್ನಲೆಯಲ್ಲಿ ಶಾಖಾಧಿಕಾರಿಯಾದ ಶ್ರೀಯು ನಿತೀಶ್ ರವರು ಸ್ಥಳ ಪರಿಶೀಲನೆ ಮಾಡಿ ಅಂದಾಜುಪಟ್ಟಿಯನ್ನು ಸಲ್ಲಿಸಿರುತ್ತಾರೆ ಹಾಗೂ ಅಂದಾಜುಪಟ್ಟಿಯ ಮಂಜೂರಾತಿಯಾಗಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

4. ಶ್ರೀ ಷಾಹಿದ್, ಸುಖ್ ಸಾಗರ್ ಎಲೆಕ್ಟ್ರಿಕಲ್, ವಿದ್ಯುತ್ ಗುತ್ತಿಗೆದಾರರು, ರಾಜೇಂದ್ರನಗರದಲ್ಲಿ ಎಲ್.ಟಿ ಮಾರ್ಗದ ತಾಮ್ರದ ತಂತಿಯಿದ್ದು ಯಾವುದೇ ಸಮಯದಲ್ಲಿ ಅಪಾಯ ಉಂಟಾಗುವ ಸಾಧ್ಯತೆಯಿರುತ್ತದೆ. ಆದ್ದುದರಿಂ ತುರ್ತಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಕೊಡಿ ಎಂದು ಕೋರಿದರು. ಈಗಾಗಲೇ ತಾಮ್ರದ ತಂತಿಯನ ಬದಲಾಯಿಸಿ ಗ್ರಾಹಕರ ದೂರವನ್ನು ಸರಿಪಡಿಸಲಾಗಿರುತ್ತದೆ.

5. ಶ್ರೀಮತಿ ಚಾಂದಿನಿ, ಕಾಳಿಸಿದ್ದನ ಹುಂಡಿ,ಮೈಸೂರು, ರವರು ಆರ್.ಆರ್.ಸಂಖ್ಯೆ ಹೆಸರು ಬದಲಾವಣೆಗಾಗಿ ಅಜ ಸಲ್ಲಿಸಿದ್ದು, ಕಛೇರಿಯಲ್ಲಿ ವಿಳಂಭ ಧೋರಣೆ ತೋರುತ್ತಿರುತ್ತಾರೆ ಎಂದು ದೂರಿರುತ್ತಾರೆ. ದಾಖಲಾತಿಗ ನ್ಯೂನ್ಯತೆಗಳಿಂದಾಗಿ ವಿಳಂಬವಾಗಿರುವುದಾಗಿ ಗ್ರಾಹಕರಿಗೆ ಮನವರಿಕೆ ಮಾಡಿ ದೂರವನ್ನು ಸರಿಪಡಿಸಲಾಗಿರುತ್ತದೆ.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

1. ಶ್ರೀಯುತ. ತಿಲಕ್‌ಮೇದಪ್ಪ, ಮನೆ ಸಂಖ್ಯೆ : 409, ಎನ್.ಆರ್. ಮೊಹಲ್ಲಾರವರು ತಮ್ಮ ಸ್ಥಾವರ ಸಂಖ್ಯೆ ಎನ್.ಎನ್.ಎಚ್41151 ರ ಬಿಲ್ಲು ಕಳೆದ ಮೂರು ತಿಂಗಳಿನಿಂದ ಬರುತ್ತಿರುವುದಿಲ್ಲ. ಆದರೆ ಸೆಸ್ಕ್ ಕಚೇರಿಯ ಪರಿಶೀಲನೆ ಮಾಡಿದಾಗ ಗಣಕ ಯಂತ್ರದಲ್ಲಿ ಬಿಲ್ಲು ತೋರಿ ಬಂದಿದ್ದು, ಪ್ರತಿ ಮಾಹೆ ಸಕಾಲದಲ್ಲಿ ನಮ್ಮ ಮನೆ ವಿದ್ಯುತ್ ಬಿಲ್ಲು ನೀಡಿ ಎಂದು ದೂರು ನೀಡಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಎನ್.ಆರ್.ಮೊಹಲ್ಲಾ ಉಪ-ವಿಭಾಗ
ಚಾ.ವಿ.ಸ.ನಿ.ನಿ. ಮೈಸೂರು.

ಪ್ರತಿಗಳು:-

- ಮುಖ್ಯಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕಇಂಜಿನಿಯರ್ (ವಿ),ಚಾವಿಸನಿನಿ., ಎನ್.ಆರ್.ಮೊಹಲ್ಲಾ, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ಬನ್ನಿಮಂಟಪ/ಮೆಲ್ಲಹಳ್ಳಿ/ಸಿದ್ದಲಿಂಗಪುರ, ರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಛೇರಿಗೆ ವರದಿ ನೀಡುವುದು.
- ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.